2016 ಕ.ತೀ.ವ. 696

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ

ಅಬ್ದುಲ್ ಕರೀಮ್ –ವಿರುದ್ಧ– ರಾಜ್ಯ ಸರ್ಕಾರ, ಯಾದಗೀರ್ ಜಿಲ್ಲೆಯ ಹುಣಸಗಿ ಪೊಲೀಸ್ ಠಾಣೆ ಮುಖಾಂತರ *

ದಂಡ ಪ್ರಕ್ರಿಯಾ ಸಂಹಿತೆ ಕಲಂ 482ರಡಿಯಲ್ಲಿ ಕ್ರಿಮಿನಲ್ ಅರ್ಜಿ

ಕ್ರಿಮಿನಲ್ ಪ್ರಕರಣವೊಂದರಲ್ಲಿ ಎದುರುದಾರ ಆರಕ್ಷಣಾಧಿಕಾರಿಗಳು ಅಧಿವಿಚಾರಣಾ ನ್ಯಾಯಾಲಯದಲ್ಲಿ ಸಲ್ಲಿಸಿದ ದೋಷಾರೋಪಣ ಪಟ್ಟಿಗೆ ತಿದ್ದುಪಡಿ ಕೋರಿ ಅದರಂತೆ ಅರ್ಜಿದಾರರನ್ನು 5ನೇ ಆರೋಪಿಯನ್ನಾಗಿಸಿ ಮಾಡಿದ ಅರ್ಜಿಯನ್ನು ಪುರಸ್ಕರಿಸಿದ ಅಧಿವಿಚಾರಣಾ ನ್ಯಾಯಾಲಯದ ಕ್ರಮವನ್ನು ಪ್ರಶ್ನಿಸಿ ಸದರಿ ಅರ್ಜಿ.

ಯಾವುದೇ ವ್ಯಕ್ತಿಯ ವಿರುದ್ಧ ಅಪರಾಧವನ್ನು ಸಾಬೀತುಪಡಿಸುವ ಅಂಶಗಳು ದೋಷಾರೋಪಣ ಪಟ್ಟಿಯಲ್ಲಿವೆಯೇ ಎಂದು ಮನವರಿಕೆ ಮಾಡಿಕೊಂಡು ಆ ವ್ಯಕ್ತಿಯ ವಿರುದ್ಧ ಪ್ರಕರಣದ ಸಂಜ್ಞೇಯತೆಯನ್ನು ನ್ಯಾಯಾಲಯವು ತೆಗೆದುಕೊಳ್ಳಬೇಕಾಗಿರುತ್ತದೆ. ಸದರಿ ಪ್ರಕರಣದಲ್ಲಿ ಅಧಿವಿಚಾರಣಾ ನ್ಯಾಯಾಲಯವು ಅರ್ಜಿದಾರರನ್ನು 5ನೇ ಆರೋಪಿತರನ್ನಾಗಿಸಿ ಮಾಡುವಾಗ ತನ್ನ ನ್ಯಾಯಿಕ ವಿವೇಚನೆಯನ್ನು ವಿವೇಕಯುತವಾಗಿ ಬಳಸಿಲ್ಲ. ಆದಕಾರಣ ಅಧಿವಿಚಾರಣಾ ನ್ಯಾಯಾಲಯದ ಆದೇಶವನ್ನು ಬದಿಗಿರಿಸಿದ ಉಚ್ಚ ನ್ಯಾಯಾಲಯವು ಸದರಿ ಅರ್ಜಿಯನ್ನು ಪುರಸ್ಕರಿಸಿದೆ.

* ಕ್ರಿಮಿನಲ್ ಅರ್ಜಿ ಸಂಖ್ಯೆ: 200604/2015, ದಿನಾಂಕ: 16ನೇ ಜುಲೈ, 2015.

***ಉಲ್ಲೇಖಿಸಲಾದ ಮೊಕದ್ದಮೆ*** ***ಪ್ಯಾರಾದಲ್ಲಿ***

*1. (2014) 3 ಎಸ್‌ಸಿಸಿ 92*
*ಹರ್‌ದೀಪ್ ಸಿಂಗ್ -ವಿರುದ್ಧ- ರಾಜಸ್ತಾನ್*
*ರಾಜ್ಯ ಸರ್ಕಾರ ಮತ್ತು ಇನ್ನೊಬ್ಬರು (ಉಲ್ಲೇ) 6*

ಅರ್ಜಿದಾರರ ಪರವಾಗಿ : ಶ್ರೀ ಅವಿನಾಶ್ ಎ. ಉಪ್‌ಲೋಂಕರ್, ನ್ಯಾಯವಾದಿ ;
ಎದುರುದಾರರ ಪರವಾಗಿ : ಶ್ರೀ ಮಕಬೂಲ್ ಅಹಮ್ಮದ್, ಹೆಚ್.ಸಿ.ಜಿ.ಪಿ.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ :**

5ನೇ ಆಪಾದಿತನೆಂದು ಪ್ರಸ್ತುತ ಅರ್ಜಿದಾರನನ್ನು ದೋಷಾರೋಪ ಪಟ್ಟಿಗೆ ಸೇರಿಸಿ, ಆತನ ವಿರುದ್ಧ ಎನ್‌ಬಿಡಬ್ಲ್ಯು ನೀಡಿ, ವಿಶೇಷ ಮೊಕದ್ದಮೆ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಧಿನಿಯಮ) ಸಂ.46/2013 ಮೊಕದ್ದಮೆಯಲ್ಲಿ ಯಾದಗಿರಿಯ ಮಾನ್ಯ ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯವು ಹೊರಡಿಸಿದ ದಿನಾಂಕ 24.07.2014ರ ಆದೇಶವನ್ನು ವಜಾಗೊಳಿಸುವಂತೆ ಕೋರಿ ಈ ಅರ್ಜಿಯನ್ನು ಸಲ್ಲಿಸಲಾಗಿದೆ.

2. ದಾಖಲೆಗಳಿಂದ ತಿಳಿದು ಬರುವುದೇನೆಂದರೆ, ಹುಣಸಗಿ ಪೊಲೀಸರು 23 ಮಂದಿ ಆಪಾದಿತ ವ್ಯಕ್ತಿಗಳ ವಿರುದ್ಧ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ, ಆದರೆ ದೋಷಾರೋಪ ಪಟ್ಟಿಯನ್ನು ಸಲ್ಲಿಸುವ ಅವಧಿಯಲ್ಲಿ ಪೊಲೀಸರು 15 ಆಪಾದಿತ ವ್ಯಕ್ತಿಗಳನ್ನು ಮಾತ್ರ ದೋಷಾರೋಪಣೆಗೆ ಒಳಪಡಿಸಿರುತ್ತಾರೆ, ಆ ದೋಷಾರೋಪ ಪಟ್ಟಿಯಲ್ಲಿ 5ನೇ ಸಂಖ್ಯೆಯ ಆರೋಪಿಯನ್ನು ದ್ಯಾಮನಾಳ್

ಗ್ರಾಮದಲ್ಲಿ ವಾಸವಾಗಿರುವ ಮುಸ್ಲಿಂ ಮತದವನಾದ ಸೆಂಟರಿಂಗ್ ಕಾರ್ಯ ನಿರ್ವಹಿಸುವ 32 ವರ್ಷ ವಯಸ್ಸಿನ ಅಬ್ದುಲ್ ಬಿನ್ ರಾಜ್‌ಸಾಬ್ ಎಂದು ತೋರಿಸಲಾಗಿದೆ. 24.7.2014ರಂದು ಯಾದಗಿರಿಯ ಪೊಲೀಸ್ ಉಪ ಅಧೀಕ್ಷಕರು ದೋಷಾರೋಪ ಪಟ್ಟಿಯಲ್ಲಿ 5ನೇ ಆರೋಪಿಯ ಸ್ಥಾನದಲ್ಲಿ ಅರ್ಜಿದಾರರ ಹೆಸರನ್ನು ಪ್ರತ್ಯಾಯೋಜಿಸುವುದಕ್ಕೆ ಅನುಮತಿಸಲು ಮತ್ತು ಅರ್ಜಿದಾರರ ವಿರುದ್ಧ ವಾರಂಟ್ ಹೊರಡಿಸಲು ಸರ್ಕಾರೀ ಅಭಿಯೋಜಕರ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ. ಅದೇ ದಿನ ಸೆಷನ್ಸ್ ನ್ಯಾಯಾಧೀಶರು ಆ ಅರ್ಜಿಯ ಮೇಲೆ ಕೆಳಕಂಡ ರೀತಿಯಲ್ಲಿ ಒಂದು ಆದೇಶವನ್ನು ಹೊರಡಿಸಿರುತ್ತಾರೆ.

> *"ದೋಷಾರೋಪ ಪಟ್ಟಿಯಲ್ಲಿ 5ನೇ ಆರೋಪಿಯ ಹೆಸರನ್ನು ಅಬ್ದುಲ್, ತಂದೆ ರಾಜಾಸಾಬ್(ಸೆಂಟರಿಂಗ್ ಕೆಲಸ) ಎಂದು ತೋರಿಸಲಾಗಿದೆ. ಆದರೆ ಈಗ 5ನೇ ಆರೋಪಿಯ ಹೆಸರನ್ನು ಅಬ್ದುಲ್ ಕರೀಮ್, ತಂದೆ: ದಸ್ತಗೀರ್‌ಸಾಬ್ ತಾಳಿಕೋಟೆ, ದ್ಯಾಮನಾಳ್ ನಿವಾಸಿ ಎಂದು ಸರಿಪಡಿಸಲು ಕೋರಿ ಅರ್ಜಿಯನ್ನು ಸಲ್ಲಿಸಲಾಗಿದೆ. 5ನೇ ಆರೋಪಿಯು ನ್ಯಾಯಾಲಯದ ಮುಂದೆ ಇದುವರೆಗೂ ಹಾಜರಾಗದಿರುವುದರಿಂದ, ಸದರಿ ಅರ್ಜಿಯಲ್ಲಿ ಕೋರಿಕೆ ಸಲ್ಲಿಸಿರುವಂತೆ 5ನೇ ಆರೋಪಿಯ ಹೆಸರನ್ನು ಸರಿಪಡಿಸಲು ಡಿ.ವೈ.ಎಸ್.ಪಿ. ಯಾದಗೀರ್ ಇವರಿಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯಸಮ್ಮತವೆಂಬುದು ನನ್ನ ಅನಿಸಿಕೆಯಾಗಿದೆ.*
>
> *ಅದರಂತೆ, ಡಿ.ವೈ.ಎಸ್.ಪಿ. ಯಾದಗೀರ್ ಅವರಿಗೆ ದೋಷಾರೋಪ ಪಟ್ಟಿಯಲ್ಲಿ 5ನೇ ಆರೋಪಿಯ ಹೆಸರನ್ನು ಸರಿಪಡಿಸಲು ಅನುಮತಿಸಲಾಗಿದೆ".*

3. ಅಂಥ ಒಂದು ಆದೇಶವನ್ನು ಹೊರಡಿಸುವ ಮುಂಚೆ ಮಾನ್ಯ ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯವು, ದೋಷಾರೋಪ ಪಟ್ಟಿಯಲ್ಲಿ ತಿಳಿಸಿದ ಅಪರಾಧಗಳಲ್ಲಿ ಅಬ್ದುಲ್ ಕರೀಮ್, ತಂದೆ: ದಸ್ತಗೀರ್ ತಾಳಿಕೋಟೆ ಎಂಬ ಹೆಸರಿನ ವ್ಯಕ್ತಿಯು ಯಾವುದಾದರೂ ರೀತಿಯಲ್ಲಿ ಭಾಗಿಯಾಗಿದ್ದಾನೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳುವತ್ತ ತನ್ನ ಗಮನವನ್ನು ಹರಿಸಿಲ್ಲದಿರುವುದು ಕಂಡು ಬರುತ್ತದೆ. ಕೇವಲ ದೋಷಾರೋಪ ಪಟ್ಟಿಯಲ್ಲಿ ಈಗಾಗಲೇ ದೋಷಾರೋಪಿಯಾಗಿರುವ ಆರೋಪಿಯ ಸ್ಥಾನದಲ್ಲಿ ಮತ್ತೊಬ್ಬ ವ್ಯಕ್ತಿಯ ಹೆಸರನ್ನು ಪ್ರತ್ಯಾಯೋಜಿಸುವುದು ಅಂಥ ವ್ಯಕ್ತಿಯ ವಿರುದ್ಧ ಸಂಜ್ಞೇಯತೆಯನ್ನು ತೆಗೆದುಕೊಳ್ಳುವುದಕ್ಕೆ ಮತ್ತು ಆತನ ವಿರುದ್ಧ ಸಮನ್ಸ್ ಅಥವಾ ವಾರಂಟ್ ಹೊರಡಿಸುವುದಕ್ಕೆ ಸಾಕಾಗುವುದಿಲ್ಲ. ಅದು ಒಬ್ಬ ವ್ಯಕ್ತಿಯ ಸ್ವಾತಂತ್ರ್ಯದ ಹಕ್ಕಿನ ಮೇಲೆ ತನ್ನದೇ ಆದ ಪರಿಣಾಮವನ್ನು ಮತ್ತು ದೂರಗಾಮಿ ಪರಿಣಾಮಗಳನ್ನು ಉಂಟು ಮಾಡುತ್ತದೆ. ಎಲ್ಲಿಯೂ, ಯಾವ ಅಪರಾಧದಲ್ಲಿಯೂ ಭಾಗಿಯಾಗಿರದ ಅಥವಾ ಆ ನಿರ್ದಿಷ್ಟ ಮೊಕದ್ದಮೆಗೆ ಸಂಬಂಧಪಡದ ಒಬ್ಬ ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ಹಾಜರಾಗಲು ಅಗತ್ಯಪಡಿಸಿದರೆ, ಅದು ಖಂಡಿತವಾಗಿಯೂ ಸಂವಿಧಾನದತ್ತವಾದ ಆತನ ಸ್ವಾತಂತ್ರ್ಯದ ಹಕ್ಕನ್ನು ಉಲ್ಲಂಘಿಸುವಂತೆ ಮಾಡುತ್ತದೆ. ಆದ್ದರಿಂದ, ನ್ಯಾಯಾಲಯವು ಯಾವುದೇ ವ್ಯಕ್ತಿಯ ವಿರುದ್ಧ ಯಾವುವೇ ಸಮನುಗಳು ಅಥವಾ ವಾರಂಟುಗಳನ್ನು ಹೊರಡಿಸುವ ಮುಂಚೆ ತುಂಬಾ ಎಚ್ಚರಿಕೆ ವಹಿಸಬೇಕು ಮತ್ತು ಹಾಗೆ ಮಾಡುವುದಕ್ಕೆ ಮುಂಚೆ, ಅಂಥ ವ್ಯಕ್ತಿಯ ವಿರುದ್ಧದ ಯಾವುವೇ ಆರೋಪಗಳಿಗೆ ಉತ್ತರ ನೀಡಲು ಆತನು ನ್ಯಾಯಾಲಯದ ಮುಂದೆ ಹಾಜರಾಗುವುದು ಕಡ್ಡಾಯವೆಂಬುದನ್ನು ನ್ಯಾಯಾಲಯವು ಸ್ವತಃ ಸ್ಪಷ್ಟಪಡಿಸಿಕೊಂಡು ಮನವರಿಕೆ ಮಾಡಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ, ಪ್ರಸ್ತುತ ಅರ್ಜಿದಾರನಾದ ಅಬ್ದುಲ್ ಕರೀಮ್ –ಬಿನ್– ದಸ್ತಗೀರ್ ಸಾಬ್ ತಾಳಿಕೋಟೆ ಹೆಸರನ್ನು ದೋಷಾರೋಪ ಪಟ್ಟಿಯಲ್ಲಿ ಸೇರ್ಪಡೆಗೊಳಿಸಬಹುದೇ ಅಥವಾ ಆ ಯಾವುದೇ ಆರೋಪಗಳಿಗೆ ಉತ್ತರ ನೀಡಲು ನ್ಯಾಯಾಲಯದ ಮುಂದೆ ಆತನನ್ನು ಕರೆಸಬಹುದೇ ಎಂಬುದನ್ನು ಖಾತ್ರಿಪಡಿಸಿಕೊಳ್ಳುವ ಸಲುವಾಗಿ ಮಾನ್ಯ ಸೆಷನ್ಸ್ ನ್ಯಾಯಾಧೀಶರು ದೋಷಾರೋಪ ಪಟ್ಟಿಯ ಕಡೆಗೆ ತಮ್ಮ ವಿವೇಚನಾಯುಕ್ತವಾದ ಗಮನವನ್ನು ಹರಿಸಿದ್ದಾರೆ ಎಂಬುದನ್ನು ಅವರು ಹೊರಡಿಸಿದ

ಆದೇಶವು ನಿರೂಪಿಸುವುದಿಲ್ಲ. ಆ ವ್ಯಕ್ತಿಯ ಹೆಸರನ್ನು 5ನೇ ಆರೋಪಿಯೆಂದು ಪ್ರತ್ಯಾಯೋಜಿಸಿದರೆ, ವಾಸ್ತವಿಕವಾಗಿ ಅದು ಆತನ ವಿರುದ್ಧ ಸಂಜ್ಞೇಯತೆಯನ್ನು ತೆಗೆದುಕೊಳ್ಳುವುದಕ್ಕೆ ಸಮನಾಗುತ್ತದೆ. ಹಾಗಾಗಿ, ಆಪಾದಿತನ ವಿರುದ್ಧ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ಸಂಜ್ಞೇಯತೆಯನ್ನು ತೆಗೆದುಕೊಳ್ಳುವ ಅವಧಿಯಲ್ಲಿ ನ್ಯಾಯಾಲಯವು ಅಂಥ ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ಹಾಜರಾಗುವಂತೆ ಅಗತ್ಯಪಡಿಸುವ ಮುಂಚೆ ಆಪಾದಿಸಲಾದ ಯಾವುವೇ ಅಪರಾಧಗಳನ್ನು ಅಂಥ ವ್ಯಕ್ತಿಯ ಮೇಲೆ ರೂಪಿಸುವುದಕ್ಕೆ ದೋಷಾರೋಪ ಪಟ್ಟಿ ದಾಖಲೆಗಳಲ್ಲಿ ಮಾಡಿದ ಆಪಾದನೆಗಳು ಸಾಕಾಗುತ್ತವೆಯೋ ಅಥವಾ ಇಲ್ಲವೇ ಎಂಬುದನ್ನು ಖಾತ್ರಿಪಡಿಸಿಕೊಳ್ಳುವ ಬಗ್ಗೆ ತನ್ನ ಗಮನ ಹರಿಸಬೇಕು. ಈ ನಿರ್ದಿಷ್ಟ ಮೊಕದ್ದಮೆಯಲ್ಲಿ ಅಂಥ ಯಾವುದೇ ಕಾರ್ಯವನ್ನು ಮಾಡಿಲ್ಲ. ಆದ್ದರಿಂದ, ಸದರಿ ಮೊಕದ್ದಮೆಯಲ್ಲಿ ಮಾನ್ಯ ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯವು ಹೊರಡಿಸಿದ ದಿನಾಂಕ 24.07.2014ರ ಆದೇಶವು ಯಾವುದೇ ಕಾರಣಗಳನ್ನು ಆಧರಿಸಿಲ್ಲದಿರುವುದರಿಂದ ಸಂಪೂರ್ಣ ಅರ್ಥರಹಿತವಾದುದಾಗಿದೆ.

4. ದಂಡ ಪ್ರಕ್ರಿಯಾ ಸಂಹಿತೆಯ 190ನೇ ಪ್ರಕರಣದ ಅಡಿಯಲ್ಲಿ ಸಂಬಂಧಪಟ್ಟ ನ್ಯಾಯಾಲಯವು ಸಂಜ್ಞೇಯತೆಯನ್ನು ತೆಗೆದುಕೊಂಡ ನಂತರ ಯಾರೇ ಆಪಾದಿತನನ್ನು ಕ್ರಿಮಿನಲ್ ಮೊಕದ್ದಮೆಗೆ ಪ್ರತ್ಯಾಯೋಜಿಸುವ ಅಥವಾ ಸೇರ್ಪಡೆಗೊಳಿಸುವ ಸಲುವಾಗಿ, ಈ ಸಂಬಂಧ ಸೂಕ್ತ ಆದೇಶಗಳನ್ನು ಹೊರಡಿಸುವುದಕ್ಕೆ ದಂಡ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣವನ್ನು ಹೊರತುಪಡಿಸಿ ಬೇರೆ ಯಾವ ಉಪಬಂಧವೂ ಇರುವುದಿಲ್ಲ. ಈ ನಿರ್ದಿಷ್ಟ ಮೊಕದ್ದಮೆಯಲ್ಲಿ, ಪೊಲೀಸ್ ಉಪ ಅಧೀಕ್ಷಕರು ದೋಷಾರೋಪ ಪಟ್ಟಿಯಲ್ಲಿ ಈಗಾಗಲೇ ಕಾಣಿಸಿರುವ 5ನೇ ಸಂಖ್ಯೆಯ ಆಪಾದಿತನ ಹೆಸರಿನ ಬದಲಿಗೆ ಅರ್ಜಿದಾರನ ಹೆಸರನ್ನು ಸೇರಿಸಲು ಕೋರಿಕೆ ಸಲ್ಲಿಸಿದ್ದರು. ಆದ್ದರಿಂದ, ಇದು ಹೊಸ ವ್ಯಕ್ತಿಯನ್ನು ಸಂಪೂರ್ಣವಾಗಿ ಅಪರಾಧದೊಳಕ್ಕೆ ತರುವುದಕ್ಕೆ ಸಮನಾದುದಾಗಿದೆ. ನಾನು ಈಗಾಗಲೇ ವಿವರಿಸಿರುವಂತೆ, ದೋಷಾರೋಪ ಪಟ್ಟಿಯಲ್ಲಿ ನಮೂದಿಸಿದ ಆಪಾದಿತನ ಹೆಸರು ಕ್ರಿಮಿನಲ್ ಮೊಕದ್ದಮೆಯಲ್ಲಿ ಸೇರಿಸಬೇಕೆಂದು ಕೋರಲಾದ ಹೆಸರಿಗಿಂತ ಸಂಪೂರ್ಣ ಭಿನ್ನವಾದುದಾಗಿದೆ. ಆದ್ದರಿಂದ,

ಯಾರೇ ಹೊಸ ಆಪಾದಿತನನ್ನು ಪ್ರತ್ಯಾಯೋಜಿಸುವ ಉದ್ದೇಶಕ್ಕಾಗಿ ಅಥವಾ ಸೇರ್ಪಡೆಗೊಳಿಸುವುದಕ್ಕಾಗಿ ಕ್ರಿಮಿನಲ್ ನ್ಯಾಯಾಲಯಗಳಿಗೆ ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಸೂಕ್ತ ವಿವೇಚನೆ ಬಳಸದೆ ಅಥವಾ ನಿರ್ದಿಷ್ಟ ಉಪಬಂಧವನ್ನು ಅನ್ವಯಿಸದೆ ಆದೇಶಗಳನ್ನು ಹೊರಡಿಸುವ ಯಾವುದೇ ಅಂತರ್ನಿಹಿತ ಅಧಿಕಾರ ವ್ಯಾಪ್ತಿಯಿರುವುದಿಲ್ಲ.

5. ಅಲ್ಲದೆ, ಮಾನ್ಯ ಸೆಷನ್ಸ್ ನ್ಯಾಯಾಧೀಶರು, ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿಯಲ್ಲಿನ ಈ ನ್ಯಾಯಾಲಯವನ್ನು ಹೊರತುಪಡಿಸಿ, ಕ್ರಿಮಿನಲ್ ನ್ಯಾಯಾಲಯಗಳಿಗೆ ನಿಹಿತವಾದ ವಿವೇಚನಾಯುಕ್ತವಾದ ಅಧಿಕಾರವಾಗಲಿ ಅಥವಾ ಅಂತರ್ನಿಹಿತ ಅಧಿಕಾರವಾಗಲಿ ಇಲ್ಲವೆಂಬುದನ್ನು ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣಕ್ಕೆ ಸಮನಾಗಿ ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಯಾವುದೇ ಉಪಬಂಧ ಇಲ್ಲವೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಆದ್ದರಿಂದ, ಅರ್ಜಿದಾರರ ಹೆಸರನ್ನು ಸೇರ್ಪಡೆ ಮಾಡುವುದಕ್ಕಾಗಿ ಪೊಲೀಸ್ ಉಪ–ಅಧೀಕ್ಷಕರು ಕೋರಿದ ಪರಿಹಾರಕ್ಕೆ ಸಂಬಂಧಿಸಿದ ಮಟ್ಟಿಗೆ ಸೂಕ್ತ ಆದೇಶಗಳನ್ನು ಹೊರಡಿಸಲು ಮಾನ್ಯ ಸೆಷನ್ಸ್ ನ್ಯಾಯಾಧೀಶರು ಯಾವ ಉಪಬಂಧವು ಅನ್ವಯವಾಗುತ್ತದೆ ಎಂಬ ಬಗ್ಗೆ ಸೂಕ್ತ ಗಮನಹರಿಸಬೇಕಾಗುತ್ತದೆ.

6. ನನ್ನ ಅಭಿಪ್ರಾಯದಲ್ಲಿ, ಯಾವುದೇ ಅರ್ಜಿಯನ್ನು ಸಲ್ಲಿಸಿದರೆ, ದಂಡ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣವನ್ನು ಅನ್ವಯಿಸಬಹುದಾಗಿದೆ. ಸದರಿ ಉಪಬಂಧವು ನ್ಯಾಯಾಲಯಕ್ಕೆ ಸದರಿ ಮೊಕದ್ದಮೆಯಲ್ಲಿ ಆಪಾದಿತನಾಗಿಲ್ಲದ ಯಾರೇ ವ್ಯಕ್ತಿಯ ವಿರುದ್ಧ ವ್ಯವಹರಣೆ ಕೈಗೊಳ್ಳಲು ಅಧಿಕಾರ ನೀಡುತ್ತದೆ, ಆದರೆ ಅಂಥ ವ್ಯಕ್ತಿಯನ್ನು ಆಪಾದಿತ ವ್ಯಕ್ತಿಯ ಜೊತೆಯಲ್ಲಿ ಯಾವ ಅಪರಾಧದ ಸಂಬಂಧವಾಗಿ ಅಧಿವಿಚಾರಣೆಗೊಳಪಡಿಸಬಹುದೋ ಆ ಅಪರಾಧವನ್ನು ಆತನೂ ಮಾಡಿದ್ದಾನೆಂದು ನ್ಯಾಯಾಲಯಕ್ಕೆ ಮನವರಿಕೆಯಾಗಿರಬೇಕಾಗುತ್ತದೆ. ಆ ಉಪಬಂಧವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವ ಸಲುವಾಗಿ

ಆ ಉಪಬಂಧವನ್ನು ಈ ಕೆಳಕಂಡಂತೆ ಉಲ್ಲೇಖಿಸುವುದು ಸೂಕ್ತ ಮತ್ತು ಅಗತ್ಯವಾಗಿದೆ:

***''319. ಅಪರಾಧದ ಬಗ್ಗೆ ದೋಷಿಗಳೆಂದು ಕಂಡುಬರುವ ಇತರ ವ್ಯಕ್ತಿಗಳ ವಿರುದ್ಧ ವ್ಯವಹರಣೆ ಕೈಗೊಳ್ಳುವ ಅಧಿಕಾರ .–***

*(1) ಒಂದು ಅಪರಾಧದ ವಿಚಾರಣೆ ಅಥವಾ ಅಧಿವಿಚಾರಣೆಯ ಕ್ರಮದಲ್ಲಿ, ಆಪಾದಿತನಲ್ಲದ ಯಾರೇ ವ್ಯಕ್ತಿಯು ಆ ಯಾವುದೇ ಅಪರಾಧ ಮಾಡಿರುವನೆಂದು ಮತ್ತು ಅದಕ್ಕಾಗಿ ಅಂಥ ವ್ಯಕ್ತಿಯನ್ನು ಆಪಾದಿತನೊಂದಿಗೆ ಒಟ್ಟಿಗೆ ಆರೋಪ ವಿಚಾರಣೆ ಮಾಡಬಹುದೆಂದು ಸಾಕ್ಷ್ಯದಿಂದ ಕಂಡುಬಂದರೆ, ನ್ಯಾಯಾಲಯವು ಅಂಥ ವ್ಯಕ್ತಿಯ ವಿರುದ್ಧ ಅವನು ಮಾಡಿರುವುದಾಗಿ ಕಂಡುಬರುವ ಅಪರಾಧಕ್ಕಾಗಿ ವ್ಯವಹರಣೆ ನಡೆಸಬಹುದು.*

*(2) ಅಂಥ ವ್ಯಕ್ತಿಯು ನ್ಯಾಯಾಲಯಕ್ಕೆ ಹಾಜರಾಗದಿದ್ದಾಗ, ಮೇಲೆ ಹೇಳಿದ ಉದ್ದೇಶಕ್ಕಾಗಿ, ಮೊಕದ್ದಮೆಯ ಪರಿಸ್ಥಿತಿಗಳು ಅಗತ್ಯಪಡಿಸಬಹುದಾದಂತೆ, ಅವನನ್ನು ದಸ್ತಗಿರಿ ಮಾಡಬಹುದು ಅಥವಾ ಸಮನು ಮಾಡಬಹುದು.*

*(3) ದಸ್ತಗಿರಿಯಲ್ಲದೆ ಅಥವಾ ಸಮನು ಮೇಲಲ್ಲದೆ ನ್ಯಾಯಾಲಯದಲ್ಲಿ ಹಾಜರಾಗುವ ಯಾರೇ ವ್ಯಕ್ತಿಯನ್ನು, ಅವನು ಮಾಡಿರುವುದಾಗಿ ಕಂಡುಬರುವ ಅಪರಾಧದ ವಿಚಾರಣೆಯ ಅಥವಾ ಅಧಿವಿಚಾರಣೆಯ ಉದ್ದೇಶಕ್ಕಾಗಿ ಅಂಥ ನ್ಯಾಯಾಲಯವು ಬಂಧಿಸಬಹುದು.*

*(4) ಉಪ–ಪ್ರಕರಣ (1)ರ ಮೇರೆಗೆ ಯಾರೇ ವ್ಯಕ್ತಿಯ ವಿರುದ್ಧ ನ್ಯಾಯಾಲಯವು ವ್ಯವಹರಣೆ ನಡೆಸಿದರೆ, ಆಗ,–*

*(ಎ) ಅಂಥ ವ್ಯಕ್ತಿಯ ಬಗೆಗಿನ ವ್ಯವಹರಣೆಗಳನ್ನು ಹೊಸದಾಗಿ ಪ್ರಾರಂಭಿಸತಕ್ಕದ್ದು ಮತ್ತು ಸಾಕ್ಷಿಗಳನ್ನು ಪುನಃ ವಿಚಾರಣೆ ಮಾಡತಕ್ಕದ್ದು;*

*(ಬಿ) ಖಂಡ(ಎ)ನ ಉಪಬಂಧಗಳಿಗೊಳಪಟ್ಟು, ಯಾವ ಅಪರಾಧದ ಬಗ್ಗೆ ವಿಚಾರಣೆ ಅಥವಾ ಅಧಿವಿಚಾರಣೆ ಪ್ರಾರಂಭವಾಯಿತೋ ಆ ಅಪರಾಧದ ಸಂಜ್ಞೇಯತೆಯನ್ನು ನ್ಯಾಯಾಲಯವು ತೆಗೆದುಕೊಂಡಾಗ, ಅಂಥ ವ್ಯಕ್ತಿಯು ಆಪಾದಿತನಾಗಿದ್ದಾನೆಂಬಂತೆ ಮೊಕದ್ದಮೆಯು ಮುಂದುವರಿಯಬಹುದು."*

ಈ ಉಪಬಂಧವು ಕೇವಲ ಅಧಿವಿಚಾರಣೆಯ ಅವಧಿಯಲ್ಲಿ ಅನ್ವಯವಾಗುವಂತಹದ್ದಷ್ಟೇ ಅಲ್ಲದೆ ವಿಚಾರಣೆಗೂ ಕೂಡ ಅನ್ವಯವಾಗುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣದ (1)ನೇ ಉಪ–ಪ್ರಕರಣವು ಅಪರಾಧದ ಬಗ್ಗೆ ಯಾವುದೇ ವಿಚಾರಣೆ ಮಾಡುವ ಅವಧಿಯಲ್ಲಿ ಅಥವಾ ಅಧಿವಿಚಾರಣೆಯ ಅವಧಿಯಲ್ಲಿ ಆಪಾದಿತನಾಗಿಲ್ಲದ ಯಾರೇ ವ್ಯಕ್ತಿಯು ಯಾವುದೇ ಅಪರಾಧವನ್ನು ಮಾಡಿದ್ದಾನೆಂದು ಸಾಕ್ಷ್ಯದಿಂದ ಕಂಡುಬಂದರೆ ಆ ವ್ಯಕ್ತಿಯನ್ನು ಆಪಾದಿತನ ಜೊತೆಯಲ್ಲಿ ಆ ಅಪರಾಧದ ಸಂಬಂಧ ಅಧಿವಿಚಾರಣೆ ಮಾಡಬಹುದು. ಇಲ್ಲಿ ಉದ್ಭವವಾಗುವ ಪ್ರಶ್ನೆಯೆಂದರೆ, ಪ್ರಕರಣದಲ್ಲಿ ಉಳಿಸಲಾದ 'ಸಾಕ್ಷ್ಯ' ಎಂಬ ಪದವು ದೋಷಾರೋಪ ಪಟ್ಟಿಯನ್ನು ರೂಪಿಸಿದ ನಂತರ ಮತ್ತು ಸಾಕ್ಷ್ಯವನ್ನು ನೀಡಿದ ನಂತರ ಮಾತ್ರವೇ ಆ ಉಪಬಂಧವು ಅನ್ವಯವಾಗುವಂತಹದ್ದಾಗಿದೆ

ಎಂಬುದನ್ನು ಅರ್ಥೈಸುತ್ತದೆಯೋ ಅಥವಾ ದೋಷಾರೋಪ ಪಟ್ಟಿ ಪೂರ್ವದ ವ್ಯವಹರಣೆಗಳಿಗೂ ಕೂಡ ಅನ್ವಯವಾಗುತ್ತದೆಂದು ಅರ್ಥೈಸುತ್ತದೆಯೋ ಎಂಬುದಾಗಿದೆ ಮತ್ತು ಸಾಕ್ಷ್ಯ ಎಂಬ ಪದವು ನ್ಯಾಯಾಲಯವು ದಾಖಲಿಸುವ ಸಾಕ್ಷ್ಯಕ್ಕೆ ಮಾತ್ರ ಅನ್ವಯಿಸುತ್ತದೆಯೋ ಅಥವಾ ತನಿಖೆಯ ಅವಧಿಯಲ್ಲಿ ಸಂಗ್ರಹಿಸುವ ಸಾಕ್ಷ್ಯಗಳಿಗೂ ಕೂಡ ಅನ್ವಯವಾಗುತ್ತದೆಯೋ ಎಂಬುದು ಇಲ್ಲಿ ಉದ್ಭವವಾಗುವ ಪ್ರಶ್ನೆಯಾಗಿದೆ. ಮೇಲ್ಕಂಡ ಸದರಿ ಪ್ರಶ್ನೆಗಳನ್ನು ವಾಸ್ತವವಾಗಿ ವರದಿಯಾದ ***ಹರ್‌ದೀಪ್ ಸಿಂಗ್ –ವಿರುದ್ಧ– ರಾಜಸ್ತಾನ್ ರಾಜ್ಯ ಸರ್ಕಾರ ಮತ್ತು ಇನ್ನೊಬ್ಬರು*** [1], ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸುಧೀರ್ಘವಾಗಿ ಮತ್ತು ಸವಿವರವಾಗಿ ಪರ್ಯಾಲೋಚಿಸಿದ್ದು, ಸದರಿ ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪೂರ್ಣ ಪೀಠವು ಪರಿಗಣನೆಗಾಗಿ ಈ ಕೆಳಕಂಡ ವಿವಾದಾಂಶಗಳನ್ನು ರೂಪಿಸಿದೆ:

> *(1) ಯಾವ ಹಂತದಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸಬಹುದಾಗಿದೆ?*
>
> *(2) ದಂಡ ಪ್ರಕ್ರಿಯಾ ಸಂಹಿತೆಯ 319 (1)ನೇ ಪ್ರಕರಣದಲ್ಲಿ ಬಳಸಲಾದ 'ಸಾಕ್ಷ್ಯ' ಎಂಬ ಪದಕ್ಕೆ ಪಾಟೀ ಸವಾಲಿನ ಮೂಲಕ ಪರೀಕ್ಷಿಸಿದ ಸಾಕ್ಷ್ಯವೆಂದು ಮಾತ್ರವೇ ಅರ್ಥವಿರಬಹುದೇ ಅಥವಾ ಸಂಬಂಧಪಟ್ಟ ಸಾಕ್ಷಿಯು ಮುಖ್ಯ ವಿಚಾರಣೆಯಲ್ಲಿ ನೀಡಿದ ಹೇಳಿಕೆಯನ್ನಾಧರಿಸಿಯೂ ಕೂಡ ಸದರಿ ಉಪಬಂಧದ ಅಡಿಯಲ್ಲಿನ ಅಧಿಕಾರವನ್ನು ನ್ಯಾಯಾಲಯವು ಚಲಾಯಿಸಬಹುದೇ?*

1. (2014) 3 ಎಸ್‌ಸಿಸಿ 92

*(3) ದಂಡ ಪ್ರಕ್ರಿಯಾ ಸಂಹಿತೆಯ 319(1)ನೇ ಪ್ರಕರಣದಲ್ಲಿ ಬಳಸಿದ 'ಸಾಕ್ಷ್ಯ' ಎಂಬ ಪದವನ್ನು ಒಂದು ವ್ಯಾಪಕ ಅರ್ಥದಲ್ಲಿ ಬಳಸಲಾಗಿದೆಯೇ ಮತ್ತು ಅದು ತನಿಖೆಯ ಅವಧಿಯಲ್ಲಿ ಸಂಗ್ರಹಿಸಿದ ಸಾಕ್ಷ್ಯವನ್ನು ಒಳಗೊಳ್ಳುತ್ತದೆಯೇ ಅಥವಾ 'ಸಾಕ್ಷ್ಯ' ಪದವು ಅಧಿವಿಚಾರಣಾ ಅವಧಿಯಲ್ಲಿ ದಾಖಲಿಸಲಾದ ಸಾಕ್ಷ್ಯಕ್ಕೆ ಸೀಮಿತವಾಗುತ್ತದೆಯೇ?*

*(4) ಆಪಾದಿತನನ್ನು ದೋಷಾರೋಪ ಪಟ್ಟಿಗೆ ಸೇರಿಸುವುದಕ್ಕೆ ದಂಡ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣದ ಅಡಿಯಲ್ಲಿನ ಅಧಿಕಾರವನ್ನು ಪ್ರಯೋಗಿಸುವುದಕ್ಕೆ ಮನವರಿಕೆಯಾಗಬೇಕಾದ ಸ್ವರೂಪ ಯಾವುದು? ದಂಡ ಪ್ರಕ್ರಿಯಾ ಸಂಹಿತೆಯ 319(1)ನೇ ಪ್ರಕರಣದ ಅಡಿಯಲ್ಲಿನ ಅಧಿಕಾರವನ್ನು ಸಮನು ನೀಡಲಾದ ಆಪಾದಿತನು ಬಹುತೇಕ ಅಪರಾಧ ನಿರ್ಣೀತನಾಗುತ್ತಾನೆಂದು ನ್ಯಾಯಾಲಯಕ್ಕೆ ಮನವರಿಕೆಯಾದರೆ ಮಾತ್ರ ಬಳಸಬಹುದೇ?*

*(5) ದಂಡ ಪ್ರಕ್ರಿಯಾ ಸಂಹಿತೆಯ 319 ನೇ ಪ್ರಕರಣದ ಅಡಿಯಲ್ಲಿನ ಅಧಿಕಾರವನ್ನು ಎಫ್ಐಆರ್‌ನಲ್ಲಿ ಹೆಸರಿಸಿರದ ಅಥವಾ ಎಫ್ಐಆರ್‌ನಲ್ಲಿ ಹೆಸರಿಸಿದ್ದು, ಆದರೆ ದೋಷಾರೋಪ ಹೊರಿಸದಿರುವ ಅಥವಾ ವಿಮೋಚನೆಗೊಳಿಸಿದ ವ್ಯಕ್ತಿಗಳಿಗೆ ಬಳಸಲಾಗುತ್ತದೆಯೇ?*

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮೇಲ್ಕಂಡ ಸದರಿ ಪರಿಶೀಲನಾಂಶಗಳನ್ನು ವಿವರವಾಗಿ ಪರ್ಯಾಲೋಚಿಸಿ, ಅಂತಿಮವಾಗಿ ಈ ಕೆಳಕಂಡ ರೀತಿಯಲ್ಲಿ ಅವುಗಳಿಗೆ ಉತ್ತರಿಸಿದೆ:

- **ಧರಂಪಾಲ್ –ವಿರುದ್ಧ– ಹರಿಯಾಣ ರಾಜ್ಯ ಸರ್ಕಾರ [(2004) 13 ಎಸ್‌ಸಿಸಿ 9]** ಮೊಕದ್ದಮೆಯಲ್ಲಿ ಸಂವಿಧಾನ ಪೀಠವು ಈಗಾಗಲೇ ನಿರ್ಣಯಿಸಿರುವ ಪ್ರಕಾರ ಅಪರಾಧ ನಡೆದ ನಂತರ ಪೊಲೀಸರು ತನಿಖೆಯನ್ನು ಮುಕ್ತಾಯಗೊಳಿಸಿದ ಮೇಲೆ ಸಲ್ಲಿಸಿದ ದಾಖಲೆಗಳಿಂದ ಆಪಾದಿತನೆಂದು ಹೆಸರಿಸಿರದ ಒಬ್ಬ ವ್ಯಕ್ತಿಯ ವಿರುದ್ಧ ಸಾಕ್ಷ್ಯಗಳು ಲಭ್ಯವಿದ್ದರೆ ಆ ವ್ಯಕ್ತಿಯ ವಿರುದ್ಧ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳಬಹುದು. ಅಂಥ ಸಂಜ್ಞೇಯತೆಯನ್ನು ದಂಡ ಪ್ರಕ್ರಿಯಾ ಸಂಹಿತೆಯ 190ನೇ ಪ್ರಕರಣದ ಅಡಿಯಲ್ಲಿ ತೆಗೆದುಕೊಳ್ಳಬಹುದಾಗಿದ್ದು, ಸೆಷನ್ಸ್ ನ್ಯಾಯಾಲಯವು ಹೆಚ್ಚುವರಿ ಆಪಾದಿತನಿಗೆ ಸಮನು ಮಾಡುವುದಕ್ಕಾಗಿ ದಂಡ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣದ ಅಡಿಯಲ್ಲಿ ಸಾಕ್ಷ್ಯ ಲಭ್ಯವಾಗುವವರೆಗೆ ಕಾಯುವ ಅಗತ್ಯವಿಲ್ಲ.

- ದಂಡ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣವು ಮುಖ್ಯವಾಗಿ ಗಮನಿಸಬೇಕಾದ ಎರಡು ಪದಾವಳಿಗಳನ್ನು ಬಳಸಿದೆ, ಅವುಗಳೆಂದರೆ, (1) ವಿಚಾರಣೆ (2) ಅಧಿವಿಚಾರಣೆ. ಅಧಿವಿಚಾರಣೆಯು ದೋಷಾರೋಪ ಪಟ್ಟಿಯನ್ನು ರೂಪಿಸಿದ ನಂತರ ಪ್ರಾರಂಭವಾದರೆ, ವಿಚಾರಣೆಯು ದೋಷಾರೋಪ ಪೂರ್ವದ ಹಂತದ್ದೆಂದು ಮಾತ್ರವೇ ಅರ್ಥ ಮಾಡಿಕೊಳ್ಳಬಹುದಾಗಿದೆ. ದಂಡ ಪ್ರಕ್ರಿಯಾ ಸಂಹಿತೆಯ

200, 201, 202ನೇ ಪ್ರಕರಣದ ಅಡಿಯಲ್ಲಿನ ವಿಚಾರಣೆಗಳು ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 398ನೇ ಪ್ರಕರಣದ ಅಡಿಯಲ್ಲಿನ ವಿಚಾರಣೆಗಳು ದಂಡ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣವು ಉದ್ದೇಶಿಸಿದ ವಿಚಾರಣೆಯ ಪ್ರಕಾರಗಳಾಗಿವೆ. ದಂಡ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣದ ಅಡಿಯಲ್ಲಿನ ಅಧಿಕಾರವನ್ನು ಚಲಾಯಿಸುವುದಕ್ಕೆ ಮತ್ತು ಅಲ್ಲದೆ ದೋಷಾರೋಪಣಾ ಪಟ್ಟಿಯ 2ನೇ ಕಲಮಿನಲ್ಲಿ ತೋರಿಸಲಾಗಿರುವ ಹೆಸರಿನ ಆಪಾದಿತನನ್ನು ಸೇರ್ಪಡೆ ಮಾಡುವುದಕ್ಕೆ ಅಂಥ ವಿಚಾರಣೆಗಳು ನಡೆಯುವ ಅವಧಿಯಲ್ಲಿ ನ್ಯಾಯಾಲಯದ ಮುಂದೆ ಬರುವ ದಾಖಲೆಗಳನ್ನು ಅಧಿವಿಚಾರಣೆ ಪ್ರಾರಂಭವಾದ ನಂತರ ನ್ಯಾಯಾಲಯದಲ್ಲಿ ದಾಖಲಿಸುವ ಸಾಕ್ಷ್ಯದ ಸಮರ್ಥನೆಗಾಗಿ ಬಳಸಿಕೊಳ್ಳಬಹುದಾಗಿದೆ.

- ಮೇಲ್ಕಂಡ ಪರಿಸ್ಥಿತಿಯ ಹಿನ್ನೆಲೆಯಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣದಲ್ಲಿನ 'ಸಾಕ್ಷ್ಯ' ಎಂಬ ಪದವನ್ನು ಅಕ್ಷರಶಃ ಅಧಿವಿಚಾರಣೆಯ ಅವಧಿಯಲ್ಲಿ ತೆಗೆದುಕೊಂಡ ಸಾಕ್ಷ್ಯವೆಂದು ಅರ್ಥ ಮಾಡಿಕೊಳ್ಳದೆ ವಿಶಾಲವಾದ ಭಾವನೆಯಲ್ಲಿ ಅರ್ಥ ಮಾಡಿಕೊಳ್ಳಬೇಕು.

- ಯಾವ ವ್ಯಕ್ತಿಯ ವಿರುದ್ಧ ಸಾಕ್ಷ್ಯಾಧಾರಗಳು ಕಂಡು ಬರುತ್ತವೆಯೋ ಆ ವ್ಯಕ್ತಿಗೆ ಮಾತ್ರ ದಂಡ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣದ ಅಡಿಯಲ್ಲಿ ಅಧಿವಿಚಾರಣೆಯನ್ನು ಎದುರಿಸುವಂತೆ ಸಮನು ಮಾಡಲಾಗುವುದೆಂಬ ಸಂಗತಿಯನ್ನು ಪರಿಗಣಿಸಿದರೆ, ಅಂಥ ಒಂದು ಸಂದರ್ಭದಲ್ಲಿ ದಂಡ ಪ್ರಕ್ರಿಯಾ

ಸಂಹಿತೆಯ 319 (4)ನೇ ಪ್ರಕರಣದ ಅಡಿಯಲ್ಲಿ ಅಂಥ ವ್ಯಕ್ತಿಯ ವಿರುದ್ಧ ವ್ಯವಹರಣೆ ನಡೆಸುವುದು ಸಂಜ್ಞೇಯತೆಯನ್ನು ತೆಗೆದುಕೊಂಡ ಹಂತದಿಂದ ಪ್ರಾರಂಭವಾಗಬೇಕಾಗುತ್ತದೆ, ಹಾಗಾಗಿ, ನ್ಯಾಯಾಲಯವು ಪಾಟೀ ಸವಾಲಿನ ಮೂಲಕ ಪರೀಕ್ಷಿಸಬೇಕೆಂದು ಸಮನು ಮಾಡಲು ಉದ್ದೇಶಿಸಿದ ಆಪಾದಿತನ ವಿರುದ್ಧದ ಸಾಕ್ಷ್ಯಕ್ಕಾಗಿ ಕಾಯುವ ಅಗತ್ಯವಿಲ್ಲ.

♦ ದಂಡ ಪ್ರಕ್ರಿಯಾ ಸಂಹಿತೆಯ 319(4)(ಬಿ) ಪ್ರಕರಣದ ಅಡಿಯಲ್ಲಿ, ಆ ನಂತರ ಸೇರ್ಪಡೆಗೊಳಿಸಲಾದ ಆಪಾದಿತನನ್ನು, ಆರಂಭದಲ್ಲಿ ನ್ಯಾಯಾಲಯವು ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಂಡಾಗ ಆತನು ಆಪಾದಿತನಾಗಿದ್ದಿದ್ದರೆ ಹೇಗೋ ಹಾಗೆ ಪರಿಗಣಿಸಬೇಕಾಗಿದ್ದರೂ ಕೂಡ, ದೋಷಾರೋಪವನ್ನು ರೂಪಿಸುವುದಕ್ಕಾಗಿ ದಂಡ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣದ ಅಡಿಯಲ್ಲಿ ವ್ಯಕ್ತಿಯನ್ನು ಸಮನುಗೊಳಿಸುವುದಕ್ಕೆ ಅಗತ್ಯವಿರುವ ಮನವರಿಕೆ ಮಾಡಿಕೊಳ್ಳಬೇಕಾದ ಮಟ್ಟವೂ ಕೂಡ ಅಷ್ಟೇ ಪ್ರಮಾಣದ್ದಾಗಿರಬೇಕಾಗುತ್ತದೆ. ಮೂಲ ಆಪಾದಿತ ಮತ್ತು ಆ ನಂತರದ ಆಪಾದಿತನನ್ನು ಸಮನು ಮಾಡುವ ಸಂಬಂಧದ ಮನವರಿಕೆ ಮಾಡಿಕೊಳ್ಳುವ ಮಟ್ಟದಲ್ಲಿನ ವ್ಯತ್ಯಾಸವು ಈಗಾಗಲೇ ಮೂಲ ಆಪಾದಿತನ ವಿರುದ್ಧ ಅಧಿವಿಚಾರಣೆಯು ಪ್ರಾರಂಭವಾಗಿರಬಹುದೆಂಬ ಮತ್ತು ಅಂಥ ಅಧಿವಿಚಾರಣೆಯ ಅವಧಿಯಲ್ಲಿ ಹೊಸದಾಗಿ ಸಮನು ಮಾಡಲಾದ ಆಪಾದಿತನ ವಿರುದ್ಧ ಸಾಕ್ಷ್ಯಾಧಾರಗಳು ಕಂಡು ಬಂದಿವೆ ಎಂಬ ಸಂಗತಿಯ ಕಾರಣದ ಮೇಲೆ ನಿಂತಿರುತ್ತದೆ. ಆಪಾದಿತನನ್ನು ಹೊಸದಾಗಿ ಸಮನು ಮಾಡುವುದು ಅಧಿವಿಚಾರಣೆ ವಿಳಂಬವಾಗುವುದಕ್ಕೆ

ಕಾರಣವಾಗುತ್ತದೆ, ಆದ್ದರಿಂದ ಆಪಾದಿತನನ್ನು (ಮೂಲ ಮತ್ತು ಆ ನಂತರದ) ಸಮನು ಮಾಡುವುದಕ್ಕಾಗಿ ಇರುವ ಮನವರಿಕೆಯ ಮಟ್ಟವು ವಿಭಿನ್ನವಾಗಿರಬೇಕಾಗುತ್ತದೆ.

- ಎಫ್ಐಆರ್‌ನಲ್ಲಿ ಹೆಸರಿಸಿಲ್ಲದ ವ್ಯಕ್ತಿಯನ್ನು ಅಥವಾ ಎಫ್ಐಆರ್‌ನಲ್ಲಿ ಹೆಸರಿಸಿದ್ದರೂ ದೋಷಾರೋಪವನ್ನು ಹೊರಿಸದೆ ವಿಮೋಚನೆಗೊಳಿಸಿದ ವ್ಯಕ್ತಿಯನ್ನು ಈಗಾಗಲೇ ಅಧಿವಿಚಾರಣೆ ಎದುರಿಸುತ್ತಿರುವ ವ್ಯಕ್ತಿಯ ಜೊತೆಗೆ ಅಧಿವಿಚಾರಣೆ ಮಾಡಬಹುದೆಂದು ಸಾಕ್ಷಿಯಿಂದ ಕಂಡು ಬಂದ ಹೊರತು, ಆ ವ್ಯಕ್ತಿಯನ್ನು ದಂಡ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣದ ಅಡಿಯಲ್ಲಿ ಸಮನು ಮಾಡಬಹುದು. ಆದರೆ, ವಿವೇಚನೆಗೊಳಿಸಲಾದ ಆಪಾದಿತನಿಗೆ ಸಂಬಂಧಪಡುವ ಮಟ್ಟಿಗೆ, ಆತನಿಗೆ ಹೊಸದಾಗಿ ಸಮನು ನೀಡುವುದಕ್ಕೆ ಮುಂಚೆ ದಂಡ ಪ್ರಕ್ರಿಯಾ ಸಂಹಿತೆಯ 300 ಮತ್ತು 398ನೇ ಪ್ರಕರಣಗಳ ಅಗತ್ಯತೆಯನ್ನು ಪೂರೈಸಬೇಕಾಗುತ್ತದೆ.

7. ಸರ್ವೋಚ್ಚ ನ್ಯಾಯಾಲಯದ ಮೇಲ್ಕಂಡ ಸದರಿ ನಿರ್ಣಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ದೋಷಾರೋಪಗಳನ್ನು ರೂಪಿಸುವ ಮುಂಚೆ ಮಾನ್ಯ ಮ್ಯಾಜಿಸ್ಟ್ರೇಟರು ವ್ಯವಹರಣೆಗಳನ್ನು ಕೈಗೊಂಡ ನಂತರ ಸೆಷನ್ಸ್ ನ್ಯಾಯಾಲಯದ ಮುಂದೆ 'ವಿಚಾರಣೆ' ಎಂದು ಸುರಕ್ಷಿತವಾಗಿ ಅರ್ಥೈಸಬಹುದಾದ ಅಧಿವಿಚಾರಣಾ ಪೂರ್ವದ ಅಥವಾ ದೋಷಾರೋಪಣಾ ಪೂರ್ವದ ಹಂತದಲ್ಲಿಯೂ ಕೂಡ ದಂಡ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣವನ್ನು ಅನ್ವಯಿಸಬಹುದೆಂಬುದು ಸ್ಫಟಿಕದಷ್ಟೇ ಸ್ಪಷ್ಟವಾಗಿದೆ. ದಂಡ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣದ ಅಡಿಯಲ್ಲಿ ಉದ್ದೇಶಿಸಿದ ಸಾಕ್ಷ್ಯವು ಕೇವಲ ನ್ಯಾಯಾಲಯವು ದಾಖಲಿಸಿದ ಸಾಕ್ಷ್ಯವನ್ನು

ಮಾತ್ರವೇ ಒಳಗೊಳ್ಳದೆ, ಅಪರಾಧವನ್ನು ಯಾರೇ ಇತರ ವ್ಯಕ್ತಿಯೂ ಕೂಡ ಮಾಡಿದ್ದಾನೆಯೇ ಮತ್ತು ಆತನನ್ನು ಆರೋಪಗಳಿಗೆ ಉತ್ತರ ನೀಡಲು ನ್ಯಾಯಾಲಯದ ಮುಂದೆ ಕರೆಸಬೇಕೇ ಎಂಬ ಬಗ್ಗೆ ಖಾತ್ರಿಪಡಿಸಿಕೊಳ್ಳಲು ತನಿಖೆಯ ಅವಧಿಯಲ್ಲಿ ಸಂಗ್ರಹಿಸಿದ, ನ್ಯಾಯಾಲಯಕ್ಕೆ ಲಭ್ಯವಿರುವ ಸಾಕ್ಷ್ಯಾಧಾರಗಳನ್ನೂ ಕೂಡ ಒಳಗೊಳ್ಳುತ್ತದೆ. ಆದ್ದರಿಂದ ಈ ನಿರ್ದಿಷ್ಟ ಮೊಕದ್ದಮೆಯಲ್ಲಿ ಅರ್ಜಿದಾರನನ್ನು ಸದರಿ ಮೊಕದ್ದಮೆಯ ಒಬ್ಬ ಆಪಾದಿತನೆಂದು ದೋಷಾರೋಪ ಹೊರಿಸುವುದಕ್ಕಾಗಿ ನಿರ್ದಿಷ್ಟ ಕಾರಣಗಳನ್ನು ವಿವರಿಸಿ ಸರ್ಕಾರೀ ಅಭಿಯೋಜಕರ ಮುಖಾಂತರ ಸಕ್ಷಮ ಪ್ರಾಧಿಕಾರಿಯು ಅದರಲ್ಲೂ ನಿರ್ದಿಷ್ಟವಾಗಿ ಪೊಲೀಸ್ ಉಪ ಅಧೀಕ್ಷಕರು ಸಲ್ಲಿಸಿರುವ ಸೂಕ್ತ ಅರ್ಜಿಯ ಬಗ್ಗೆ ಮಾನ್ಯ ಸೆಷನ್ಸ್ ನ್ಯಾಯಾಧೀಶರು ದಾಖಲೆಯಲ್ಲಿರುವ ಮೇಲ್ಕಂಡ ಸದರಿ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿ ದಂಡ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣದಡಿಯಲ್ಲಿ ನಿರೂಪಿಸಿದ ಕಾರ್ಯ ವಿಧಾನವನ್ನು ಪಾಲಿಸಬೇಕಾಗುತ್ತದೆ. ಅಷ್ಟೇ ಅಲ್ಲದೆ, ದಂಡ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣದ ಇತರ ಒಳಾಂಶಗಳನ್ನು ಮಾನ್ಯ ಸೆಷನ್ಸ್ ನ್ಯಾಯಾಧೀಶರು ಪಾಲನೆ ಮಾಡಬೇಕಾಗುತ್ತದೆ. ಈ ಮೊದಲೇ ಗಮನಿಸಿರುವಂತೆ ನ್ಯಾಯಾಲಯವು ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳಿಗೆ ಸಂಬಂಧಿಸಿದಂತೆ ತನ್ನ ನಿರ್ಣಯಗಳನ್ನು ದಾಖಲಿಸಬೇಕು ಮತ್ತು ಯಾವ ಅಪರಾಧಕ್ಕಾಗಿ ಆಪಾದಿತನೆಂದು ದೋಷಾರೋಪಣಾ ಪಟ್ಟಿಗೆ ಸೇರಿಸಿರದ ಅರ್ಜಿದಾರನನ್ನು ಇತರ ಆಪಾದಿತ ವ್ಯಕ್ತಿಗಳೊಂದಿಗೆ ಅಧಿವಿಚಾರಣೆಗೊಳಪಡಿಸಬಹುದೋ ಆ ಅಪರಾಧವನ್ನು ಆತನೂ ಕೂಡ ಮಾಡಿದ್ದಾನೆಂದು ನಿರ್ಣಯಕ್ಕೆ ಬಂದ ನಂತರ ಮಾತ್ರವೇ ನ್ಯಾಯಾಲಯವು ಆರೋಪಗಳಿಗೆ ಉತ್ತರಿಸಲು ಸದರಿ ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ಕರೆಸಬಹುದು. ಪ್ರಶ್ನಿತ ಆದೇಶವನ್ನು ಹೊರಡಿಸುವ ಮುಂಚೆ ಮಾನ್ಯ ಸೆಷನ್ಸ್ ನ್ಯಾಯಾಧೀಶರು ಮೇಲ್ಕಂಡ ಸದರಿ ಯಾವುದೇ ಕಾರ್ಯಚಟುವಟಿಕೆಯನ್ನು ನಡೆಸಿಲ್ಲ. ಆದ್ದರಿಂದ, ಮಾನ್ಯ ಸೆಷೆನ್ಸ್ ನ್ಯಾಯಾಧೀಶರು ಹೊರಡಿಸಿದ ಆದೇಶವು ರದ್ದಾಗುವುದಕ್ಕೆ ತಕ್ಕದ್ದಾಗಿದೆ. ಹಾಗಾಗಿ, ಈ ಮುಂದಿನ ಆಜ್ಞೆಯನ್ನು ಹೊರಡಿಸಲಾಗಿದೆ:

## ಆಜ್ಞೆ

(1) ಅರ್ಜಿಯನ್ನು ಪುರಸ್ಕರಿಸಲಾಗಿದೆ.

(2) ತತ್ಪರಿಣಾಮವಾಗಿ, ಮಾನ್ಯ ಸೆಷನ್ಸ್ ನ್ಯಾಯಾಧೀಶರು ಹೊರಡಿಸಿದ ದಿನಾಂಕ 24.07.2014ರ ಆದೇಶವನ್ನು ಮತ್ತು ಈ ಅರ್ಜಿದಾರರಿಗೆ ಸಂಬಂಧಪಡುವ ಮಟ್ಟಿಗೆ ವಿಶೇಷ ಮೊಕದ್ದಮೆ (ಪ.ಜಾ/ಪ.ಪಂ) ಸಂ.46/2013 (ಅಪರಾಧ ಸಂ.101/2013)ರಲ್ಲಿನ ಮುಂದಿನ ಎಲ್ಲಾ ವ್ಯವಹರಣೆಗಳನ್ನು ಈ ಮೂಲಕ ರದ್ದುಪಡಿಸಲಾಗಿದೆ.

(3) ಹೊಸದಾಗಿ ಅರ್ಜಿ ಸಲ್ಲಿಸುವುದು ಅಗತ್ಯವಿದ್ದರೆ ಅಥವಾ ಸದರಿ ಅರ್ಜಿಗೆ ಆಧಾರವಾಗಿ ಯಾವುದೇ ಹೆಚ್ಚುವರಿ ಮಾಹಿತಿಯನ್ನು ನೀಡುವುದು ಅಗತ್ಯವಿದ್ದರೆ ಅದನ್ನು ಸಲ್ಲಿಸುವುದಕ್ಕೆ ಸರ್ಕಾರೀ ಅಭಿಯೋಜಕರಿಗೆ ಅನುಮತಿ ನೀಡುವ ಮೂಲಕ ಮತ್ತು ಸಂಪೂರ್ಣ ದೋಷಾರೋಪ ಪಟ್ಟಿ ದಾಖಲೆಗಳನ್ನು ಮತ್ತು ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದ ನಂತರ ಯಾದಗಿರಿಯ ಪೊಲೀಸ್ ಉಪ ಅಧೀಕ್ಷಕರು ಸಲ್ಲಿಸಿದ ಮೆಮೋ ಮತ್ತು ಅರ್ಜಿಯನ್ನು ದಂಡ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ್ದಿದ್ದರೆ ಹೇಗೋ ಹಾಗೆ ಪರಿಗಣಿಸುವಂತೆ ಮಾನ್ಯ ಸೆಷನ್ಸ್ ನ್ಯಾಯಾಧೀಶರಿಗೆ ನಿರ್ದೇಶಿಸಲಾಗಿದೆ.

(4) ಈ ಮೇಲೆ ನಿರೂಪಿಸಿದ ನಿರ್ಣಯಗಳ ಹಿನ್ನೆಲೆಯಲ್ಲಿ, ಕಾನೂನಿಗನುಸಾರವಾಗಿ ಸೂಕ್ತ ಆದೇಶಗಳನ್ನು ಹೊರಡಿಸುವಂತೆ ಮಾನ್ಯ ಸೆಷನ್ಸ್ ನ್ಯಾಯಾಧೀಶರಿಗೆ ನಿರ್ದೇಶಿಸಲಾಗಿದೆ.

---